ಹಾಗೆ ಇರುತ್ತದೆ. ಎತ್ತರವಾದ ಪರ್ವತವು ಧ್ಯಾನಕ್ಕೆ ಪ್ರಶಸ್ತವಾದ ಜಾಗ. ನಾವು ಮರಿಯಲ್ಲಿ ನೋಡುತ್ತೇವೆ, ಅದು ಭಜನೆ ಕೀರ್ತನೆಗಳಿಗೆ ಉತ್ತಮವಾದ ಜಾಗವೇ ಹೊರತು, ಧ್ಯಾನಕ್ಕಲ್ಲ. ಮರಿಯಲ್ಲಿ ಇರುವುದು ಭಜನೆ ಕೀರ್ತನೆಗಳ ಭಾವ.

ಇದೆಲ್ಲ ಸರಿ, ನಿಜವಾಗಿಯೂ ಇರಬೇಕಾದ್ದು ಉತ್ಕಟ ಆಕಾಂಕ್ಷೆ. ಉತ್ಕಟೇಚ್ಛೆ ಇದ್ದರೆ ಯಾವ ಜಾಗವೂ ಆದೀತು. ಶ್ರೀರಾಮಕೃಷ್ಣರ ಜೀವನವನ್ನೇ ನೋಡಿ, ಜೀವನಪೂರ್ತಿ ಎಲ್ಲ ಸಾಧನೆಗಳನ್ನೂ ಅವರು ಒಂದೇ ಕಡೆ ಇದ್ದು ಮಾಡಿದರು. ನಮ್ಮ ಗುರಿ ಏನೆಂದರೆ, ಹೇಗಾದರೂ ಮಾಡಿ ದೃಢಭಾವದಿಂದ ಶ್ರೀರಾಮಕೃಷ್ಣರನ್ನು ಒಲಿಸಿಕೊಳ್ಳಲು ಪ್ರಯತ್ನಮಾಡುವುದು. ಮನಸ್ಸಿನ ಏಕಾಗ್ರತೆ ಬಂದರೆ ಸ್ವಾಭಾವಿಕವಾಗಿಯೇ ಧ್ಯಾನಸಿದ್ಧಿಯಾಗುತ್ತದೆ. ನಾನು ಉತ್ತರಕಾಶಿಯಲ್ಲಿ ಇದ್ದಾಗಿನ ಒಂದು ಘಟನೆ ನೆನಪಿಗೆ ಬರುತ್ತದೆ. ಒಬ್ಬ ಯುವ ಸಾಧು ಬಾರಿಬಾರಿಗೂ ಧ್ಯಾನದ ಜಾಗವನ್ನು ಬದಲಾವಣೆ ಮಾಡುತ್ತಿರುವುದನ್ನು ವೃದ್ಧ ಸಾಧುಗಳೊಬ್ಬರು ನೋಡಿದರು. "ಯಾಕಪ್ಪ, ಹೀಗೆ ಮಾಡುತ್ತಿ?" ಎಂದು ಅವರು ಕೇಳಿದರು. ಕಿರಿಯ ಸಾಧು ಹೇಳಿದರು, "ಎಲ್ಲಿ ಕುಳಿತರೂ ಮರದ ಮೇಲೆ ಹಕ್ಕಿಗಳು ಚಿಲಿಪಲಿಗುಟ್ಟುತ್ತಿರುತ್ತವೆ." ಇದನ್ನು ಕೇಳಿ ವೃದ್ಧ ಸಾಧುಗಳು ಹೇಳಿದರು, "ಮಗು, ಮೊದಲು ನಿನ್ನ ಮನಸ್ಸು ಚಿಲಿಪಿಲಿಗುಟ್ಟುತ್ತಿರುವುದನ್ನು ನಿಲ್ಲಿಸು."

**ಪ್ರಶ್ನೆ : ಸ್ವಾಮೀಜಿ, ಧ್ಯಾನವೆಂದರೆ ಒಂದು ರೀತಿಯ ಕಲ್ಪನೆ. ಇಂತಹ ಕಲ್ಪನೆಯಿಂದ ಸದ್ವಸ್ತುವಿನ ಅನುಭವ ಆಗುತ್ತದೆಯೆ?**

**ಸ್ವಾಮೀಜಿ :** ಧ್ಯಾನ ಮತ್ತು ಕಲ್ಪನೆ – ಇವುಗಳ ನಡುವೆ ವ್ಯತ್ಯಾಸ ಇದೆ. 'ಕಲ್ಪನೆ' ಎಂದರೆ ವಾಸ್ತವವಲ್ಲದ ಸಂಗತಿಯನ್ನು ಚಿಂತಿಸುವುದು; ಅಂದರೆ ಇಲ್ಲದ್ದನ್ನು ಚಿಂತಿಸುವುದು. ಆದರೆ ಧ್ಯಾನದಲ್ಲಿ ಯಾವ ವಸ್ತುವಿನ ವಿಚಾರ ಮಾಡುತ್ತೇವೆಯೋ ಅದರ ಅಸ್ತಿತ್ವದ ಮೇಲೆ ನಾವು ವಿಶ್ವಾಸವಿಟ್ಟಿರುತ್ತೇವೆ. ನಮ್ಮ ಧ್ಯಾನವಸ್ತುವಿಗೆ ಅಸ್ತಿತ್ವವಿದೆ ಎಂಬ ದೃಢವಿಶ್ವಾಸ ನಮಗಿರುತ್ತದೆ. ಕಲ್ಪನೆಯ ಸಹಾಯದಿಂದಲೇ ನಾವು ಧ್ಯಾನಮಾಡಲು ಪ್ರಯತ್ನಪಡುವುದು. ಆದರೂ ಅಂತಹ ಕಲ್ಪನೆ ಕೇವಲ ಭ್ರಮೆಯಲ್ಲ. ಯಾವ ಕುರುಹೂ ಇಲ್ಲದ ಅವಾಸ್ತವಿಕ ಸಂಗತಿಯ ಬಗ್ಗೆ ವಿಚಾರ ಮಾಡುವುದನ್ನು 'ಕಲ್ಪನೆ' ಎನ್ನುತ್ತೇವೆ. ಹೇಗೆಂದರೆ ಬಟ್ಟಬಯಲಾಗಿರುವ ಆಕಾಶದಲ್ಲಿ ಒಂದು ಉದ್ಯಾನವನವಿದೆ ಎಂದು ಕಲ್ಪನೆಮಾಡುವುದು. ಗಗನದಲ್ಲಿ ಉದ್ಯಾನವನ ಇರುವ ಸಂಭವವೇ ಇಲ್ಲ; ಅದು ಬರೀ ಕಲ್ಪನೆ ಮಾತ್ರ. ವಿವೇಕಾನಂದರು ಒಂದು ಕಡೆ ಹೀಗೆ ಹೇಳುತ್ತಾರೆ: "ಒಂದು ವೇಳೆ ಸದ್ಯ ನಾವು ಬ್ರಹ್ಮಸ್ವರೂಪಿಗಳಲ್ಲದಿದ್ದರೆ, ಸಾವಿರಾರು ಸಲ ನಾವು ಮನನ ನಿದಿಧ್ಯಾಸನ ಮಾಡಿದರೂ ನಮಗೆ ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ." ನಮ್ಮ ನೈಜ ಅಸ್ತಿತ್ವವೇ ಬ್ರಹ್ಮತ್ತ್ವ. ಹಾಗಾಗಿ ಮನನ, ನಿದಿಧ್ಯಾಸನಗಳ ಸಹಾಯದಿಂದ ನಮ್ಮ ಸ್ವಸ್ವರೂಪದ ವಿಪರೀತಜ್ಞಾನವನ್ನು ನಿವಾರಣೆ ಮಾಡಿಕೊಂಡು, ಸ್ವರೂಪಜ್ಞಾನದ ಅಥವಾ ಆತ್ಮಜ್ಞಾನದ ಅನುಭವವನ್ನು ನಾವು ಪಡೆದುಕೊಳ್ಳಬೇಕು.

**ಪ್ರಶ್ನೆ : ಮನಸ್ಸಿನ ಚಂಚಲತೆಯಿಂದ ಆಗಾಗ ಜಪಧ್ಯಾನಗಳನ್ನು ಮಾಡಲು ಕುಳಿತುಕೊಳ್ಳಲು ಆಗುವುದಿಲ್ಲ. ಆಗ ಎದ್ದು ಬಿಡಬೇಕೇ?**

**ಸ್ವಾಮೀಜಿ :** ನಾವು ಕುಳಿತುಕೊಳ್ಳುವುದೇ ಪ್ರಯತ್ನ ಮಾಡಲು. ಇನ್ನು ಎದ್ದೇಳುವುದಾದರೂ ಏಕೆ? ಹಾಗೂ ಆಗದಿದ್ದರೆ ಸದ್ಗ್ರಂಥಗಳನ್ನು ಓದಿ, ಪುನಃ ಕುಳಿತುಕೊಳ್ಳಲು ಪ್ರಯತ್ನಿಸಬೇಕು. ಮನಸ್ಸಿನೊಳಗೆ ಏನೆಲ್ಲ ಉಂಟೋ ಅವೆಲ್ಲ ಜಪ ಧ್ಯಾನಗಳ ಸಮಯದಲ್ಲಿಯೇ ಮೇಲೇಳುತ್ತವೆ. ಒಳಗಿನ ಅನಾವಶ್ಯಕ ವಿಚಾರಗಳನ್ನು ಒಂದೇ ಕ್ಷಣದಲ್ಲಿ ಹೊರಹಾಕಿ ಭಗವಚ್ಚಿಂತನೆ ಮಾಡಿಸಬೇಕೆಂದು ಮನಸ್ಸು ಇಚ್ಛಿಸುತ್ತದೆಯೇ? ಖಂಡಿತ ಇಲ್ಲ. ಕೆಲಸಕಾರ್ಯಗಳಲ್ಲಿಯೂ ಇದೇ ತರಹ ಆಗುತ್ತದೆ. ಇದಕ್ಕೆ ಉಪಾಯವಿಷ್ಟೇ. ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಇತರ ವಿಚಾರಗಳನ್ನು ಮನಸ್ಸಿನಿಂದ ದೂರಮಾಡಿ, ಸಾಧ್ಯವಾದಷ್ಟು ಭಗವಚ್ಚಿಂತನೆಯನ್ನು ಹೆಚ್ಚು ಹೆಚ್ಚು ಮಾಡಲು ಪ್ರಯತ್ನ ಮಾಡಬೇಕು. ಹಾಗೆ ಮಾಡದಿದ್ದರೆ, ಅನಾವಶ್ಯಕ ವಿಚಾರಗಳು ಮನಸ್ಸಿನಲ್ಲಿ ಚಂಚಲತೆಯನ್ನು ಉಂಟುಮಾಡಿ, ಸಾಧಕನನ್ನು ಆಸನದಿಂದ ಎದ್ದೇಳುವಂತೆ ಮಾಡುತ್ತವೆ.

ನಿಜ ಹೇಳಬೇಕೆಂದರೆ, ಇಡೀ ದಿನ ವಿವಿಧ ಕೆಲಸಕಾರ್ಯಗಳನ್ನು ಮಾಡುತ್ತ, ಉಳಿದ ಸಮಯವನ್ನು ಕಾಡುಹರಟೆಗಳಲ್ಲಿ ವ್ಯರ್ಥ ಮಾಡಿ, ಎಲ್ಲೋ ಅಲ್ಪ ಸ್ವಲ್ಪ ಸಮಯ ಮಾತ್ರ ಸಾಧನೆಮಾಡಲು ಕುಳಿತುಕೊಳ್ಳುತ್ತೇವೆ. ಸಾಧನೆ–ಭಜನೆಗಳೇನು ಅಷ್ಟು ಸುಲಭವೆ? ಈ ರೀತಿ ಮಾಡಿ ಏನನ್ನು ತಾನೇ ಸಾಧಿಸಬಹುದು? ಪ್ರತಿಕ್ಷಣವೂ ವ್ಯರ್ಥವಾಗಿ ಹೋಗುತ್ತಿದೆ. ಪ್ರತಿದಿನವೂ ವ್ಯರ್ಥವಾಗಿ ಹೋಗುತ್ತಿದೆ. ಇದರ ಬಗ್ಗೆ ಸ್ವಲ್ಪ ಯೋಚಿಸಿದರೂ ನಮ್ಮ ಮನಸ್ಸು ಕಳವಳಗೊಳ್ಳುತ್ತದೆ. ಆಗ ಮನಸ್ಸಿಗೆ ಯಾವುದೂ ಹಿಡಿಸುವುದಿಲ್ಲ. ಅಂತಹ ವ್ಯಾಕುಲತೆ ನಮ್ಮಲ್ಲಿ ಎಲ್ಲಿ ತಾನೇ ಇದೆ? ಅಧಿಕಾಂಶ ಜನರು 'ಹೇಗೋ ಆಗುತ್ತಿದೆ, ಹೇಗೋ ಆಗುತ್ತದೆ', 'ಆದರೆ ಆಯಿತು, ಹೋದರೆ ಹೋಯಿತು' – ಈ ಮನಸ್ಥಿತಿಯಲ್ಲಿರುತ್ತಾರೆ.

ಎಷ್ಟೋ ವರ್ಷಗಳ 'ಸಾಧನೆ' ಎಂಬ ನಿರಂತರ ಹೋರಾಟದಿಂದ ವ್ಯಾಕುಲತೆ ಒದಗಿಬರುತ್ತದೆ. ಅಂತಹ ಅಶಾಂತಿ ನಮ್ಮಲ್ಲಿ ಉದ್ಭವವಾಗಬೇಕು. ಸ್ವಾಮಿ ಬ್ರಹ್ಮಾನಂದರು ಹೇಳುತ್ತಿದ್ದರು, " 'ಆತ' (ಭಗವಂತ) ಸಿಗಲಿಲ್ಲವೆಂಬ ಅಶಾಂತಿ ಮನಸ್ಸಿನೊಳಗೆ ಸದಾ ಜಾಗ್ರತವಾಗಿರಬೇಕು" ಎಂದು. ಇದು ಬಹು ಅಮೂಲ್ಯವಾದ ಮಾತು. 'ಆತ' ಸಿಗಲಿಲ್ಲವಲ್ಲವೆಂಬ ಅಶಾಂತಿ ಬೇಕು. ಈ ಬಗೆಯ 'ಅಶಾಂತಿ'ಯೇ (ನಾವು ಆಧ್ಯಾತ್ಮಿಕ ಪಥದಲ್ಲಿ) ಮುಂದುವರಿಯಲು ಕಾರಣವಾಗುತ್ತದೆ.

# ನೆನಪಿನಂಗಳದಲ್ಲಿ..

ಧಾರಾವಾಹಿ

ಪ್ರವ್ರಾಜಿಕಾ ಭಾರತೀಪ್ರಾಣಾ

೧೯೧೯ ರಲ್ಲಿ ಶ್ರೀಮಾತೆಯವರು ರಾಧುವಿನ ಜೊತೆ ನಿವೇದಿತಾ ಸ್ಕೂಲಿನ ವಸತಿಗೃಹಕ್ಕೆ ಬಂದರು. ರಾಧುವಿಗೆ ಮಗು ಹುಟ್ಟುವ ಸಮಯ. ಅವಳು ಯಾವುದೇ ರೀತಿಯ ಶಬ್ದವನ್ನೂ ಸಹಿಸುತ್ತಿರಲಿಲ್ಲ. ಸ್ಕೂಲಿನಲ್ಲಿಯೂ ಇರಲು ರಾಧು ಒಪ್ಪಲಿಲ್ಲ. ಹೀಗಾಗಿ ಅವಳನ್ನು ಕರೆದುಕೊಂಡು ಶ್ರೀಮಾತೆ ಜಯರಾಂಬಾಟಿಗೆ ಹೊರಟರು. ನನ್ನನ್ನೂ ಜೊತೆ ಬರುವಂತೆ ಕರೆದರು. ಸುಧೀರಾ ಅಕ್ಕ ಹೇಳಿದರು, "ರಾಧುವಿಗೆ ಮಗು ಹುಟ್ಟಲು ಇನ್ನೂ ಸಮಯವಿದೆ. ಸರಳಾ ಸ್ವಲ್ಪ ದಿನ ಬಿಟ್ಟು ಹೋಗಲಿ."

ಶ್ರೀಮಾತೆ ಹೊರಟುಹೋದ ಮೇಲೆ ಸುಧೀರಾ ಅಕ್ಕ ನನ್ನನ್ನು ಕರೆದುಕೊಂಡು ಕಾಶಿಗೆ ಹೋದರು. ಅಲ್ಲಿನ ಸೇವಾಶ್ರಮದಲ್ಲಿ ವಿಶ್ವೇಶ್ವರಿ ಎಂಬ ಹುಡುಗಿಗೆ ನರ್ಸಿಂಗ್ ಕಲಿಸಲು ನನಗೆ ಹೇಳಿದರು. ಎರಡು ತಿಂಗಳು ನಾನು ಅಲ್ಲಿ ಕೆಲಸ ಮಾಡಿದೆ. ಅಷ್ಟರಲ್ಲಿ ಸ್ವಾಮಿ ಶಾರದಾನಂದರ ಪತ್ರ ಬಂದಿತು, "ಶ್ರೀಮಾತೆ ರಾಧುವಿನ ಆರೋಗ್ಯದ ಬಗ್ಗೆ ತುಂಬ ಚಿಂತಿತರಾಗಿದ್ದಾರೆ. ಪತ್ರ ಸಿಕ್ಕೊಡನೆ ಸರಳಾ ಹೊರಟುಬರಲಿ."

ಶ್ರೀಮಾತೆ ಆಗ ಕೋಯಲ್‌ಪಾರಾದಲ್ಲಿದ್ದರು. ಮರುದಿನವೇ ನಾನು ಕೊಲ್ಕತಾದ ರೈಲು ಹತ್ತಿದೆ. ಹೊರಡುವ ಮೊದಲು ಸ್ವಾಮಿ ತುರೀಯಾನಂದರಿಗೆ ಪ್ರಣಾಮ ಮಾಡಲು ಹೋದೆ. ಶ್ರೀಮಾತೆಯ ಬಳಿ ಹೋಗುತ್ತಿದ್ದೇನೆ ಎಂದು ಕೇಳಿ ಆನಂದಿತರಾಗಿ ಅವರು ಹೇಳಿದರು, "ಶ್ರೀಮಾತೆ ಸ್ವಯಂ ಮಹಾಮಾಯೆಯೇ ಸರಿ! ಎಂತಹ ಒಂದು ಮಹಾಶಕ್ತಿ ಈ ಜಗತ್ತಿನ ಕಲ್ಯಾಣಕ್ಕಾಗಿ ಬಂದಿದೆ! ಯಾವ ಮನಸ್ಸನ್ನು ನಾವು ಇಲ್ಲಿಗೆ (ತಮ್ಮ ಕಂಠವನ್ನು ತೋರಿಸುತ್ತಾ) ಎತ್ತಲು ಅತಿ ಕಷ್ಟದಿಂದ ಪ್ರಯತ್ನಿಸುತ್ತಿದ್ದೇವೆಯೋ, ಅಂಥ ಮನಸ್ಸನ್ನು ಅವರು ಆ ಜಾಗಕ್ಕೆ, 'ರಾಧು ರಾಧು' ಎನ್ನುತ್ತಾ ಬಲವಂತದಿಂದ ಇಳಿಸುತ್ತಿದ್ದಾರೆ! ನಾನು ಏನು ಹೇಳುತ್ತಿದ್ದೇನೆಂದು ನಿನಗೆ ಅರ್ಥವಾಗುತ್ತಿದೆ ತಾನೆ? ಜೈ ಮಹಾಶಕ್ತಿ!" ಎನ್ನುತ್ತಾ ಅವರು ಮತ್ತೆ ಮತ್ತೆ ನಮಸ್ಕರಿಸಲಾರಂಭಿಸಿದರು.

ಕೊಲ್ಕತಾವನ್ನು ತಲುಪಿದ ಮಾರನೆಯ ದಿನವೇ ನಾನು ನಿವೇದಿತಾ ಸ್ಕೂಲಿನ ಯುಗಲ್ ಎಂಬ ಹುಡುಗಿ ಹಾಗೂ ಶ್ರೀಮಾತೆಯಿಂದ ದೀಕ್ಷೆ ಪಡೆಯಲೆಂದು ಬಂದ ರುಮಾ ಎಂಬ ಗುಡ್ಡಗಾಡಿನ ಹುಡುಗಿಯೊಂದಿಗೆ ಕೋಯಲ್‌ಪಾರಾದತ್ತ ಹೊರಟೆ. ಕೋಯಲ್‌ಪಾರಾದಲ್ಲಿ ಸಂಭ್ರಮದ ವಾತಾವರಣವಿತ್ತು. ಶ್ರೀಮಾತೆಯವರ ಸುತ್ತಲೂ ಬಹಳ ಜನರು ಸೇರಿಕೊಂಡಿದ್ದರು. ರಾಧು, ನಳಿನಿ, ಮಾಕು, ಭೂದೇವನ ಪತ್ನಿ, ರಾಧುವಿನ ತಾಯಿ (ಹುಚ್ಚು ಅತ್ತೆ), ನಂದರಾಣಿ ಭೋಲಾ, ಯಾಮಿನಿಯ ಇಬ್ಬರು ಸಹೋದರಿಯರು – ಇವರೆಲ್ಲರ ಜೊತೆಗೆ ಸಂನ್ಯಾಸಿಗಳು, ಬ್ರಹ್ಮಚಾರಿಗಳು ಹಾಗೂ ಪುರುಷ ಭಕ್ತರೂ ಇದ್ದರು. ಮಂತ್ರದೀಕ್ಷೆಯೂ ಆಗಾಗ್ಗೆ ಜರುಗುತ್ತಿತ್ತು.

ನಾವು ಬೆಳಗ್ಗೆ ೧೦ ಗಂಟೆಗೆ ಕೋಯಲ್‌ಪಾರಾ ತಲುಪಿದೆವು. ಶ್ರೀಮಾತೆ ಜ್ವರ ಹಿಡಿದು ಮಲಗಿದ್ದರು. ರಾಧು ಕೋಯಲ್‌ಪಾರಾ, ಜಗದಂಬಾ ಆಶ್ರಮ – ಈ ಎರಡೂ ಕಡೆಯೂ ಇರಲು ಒಪ್ಪದೆ, ಸ್ವಾಮಿ ಕೇಶವಾನಂದರ ಪೂರ್ವಾಶ್ರಮದ ಮನೆಯ ಕೊಟ್ಟಿಗೆಯ ಒಂದು ಕೊಠಡಿಗೆ ಹೋಗಿ ಇದ್ದಳು; ಹುಚ್ಚಿಯಂತೆ ಆಡುತ್ತಿದ್ದಳು. ಕೋಣೆಯ ಹೊರಗಿನ ಚಿಕ್ಕ ವರಾಂಡದಲ್ಲಿ ಯಾಮಿನಿ ಹಾಗೂ ಒಬ್ಬಳು ಗೃಹಿಣಿ ಮಲಗುತ್ತಿದ್ದರು. ಬ್ರಹ್ಮಚಾರಿ ವರದಾ ಮಹಾರಾಜ್ ಹಾಗೂ ಇನ್ನೂ ಒಬ್ಬರು ಗಂಡಸರು ಹೊರಗೆ ಮಂಚದ ಮೇಲೆ ಮಲಗುತ್ತಿದ್ದರು. ರಾಧುವಿಗೆ ಸ್ನಾನ ಮಾಡಿಸುವುದು, ತಿನ್ನಿಸುವುದು ಪ್ರತಿಯೊಂದನ್ನೂ ಮಾಡಿಕೊಡಬೇಕಿತ್ತು. ಇದಲ್ಲದೆ ಆಕೆ ನಾನಾ ರೀತಿಯ ಫಜೀತಿಯನ್ನೂ ಹುಟ್ಟಿಸುತ್ತಿದ್ದಳು. ಇಷ್ಟೆಲ್ಲಾ ಗೊಂದಲಗಳಿದ್ದರೂ ಶ್ರೀಮಾತೆಯವರು ಕೇಂದ್ರಬಿಂದುವಾಗಿರುವ ಆ ಜಾಗದಲ್ಲಿ ಒಂದು ರೀತಿಯ ಆನಂದದ ಪ್ರವಾಹವೇ ಹರಿಯುತ್ತಿತ್ತು. ಅಲ್ಲಿ ಶ್ರೀಮಾತೆಯ ಪುಣ್ಯಸಾನ್ನಿಧ್ಯದಲ್ಲಿದ್ದ ಎಲ್ಲರಲ್ಲಿಯೂ ಒಂದು ಸರಳ ಪವಿತ್ರಭಾವ ಎದ್ದು ಕಾಣುತ್ತಿತ್ತು. ಯೋಗಿನ್ ಮಾ ನಮ್ಮನ್ನೆಲ್ಲಾ ನೋಡಿ, "ಇಲ್ಲಿ ಎಲ್ಲರೂ ಋಷಿಕನ್ಯೆಯರಂತೆ ಕಾಣುತ್ತಾರೆ" ಎನ್ನುತ್ತಿದ್ದರು.

ಒಂದೆರಡು ದಿನಗಳಲ್ಲಿ ಶ್ರೀಮಾತೆಯವರ ಜ್ವರ ಬಿಟ್ಟಿತು. ರುಮಾಳಿಗೆ ದೀಕ್ಷೆಯೂ ಆಯಿತು. ದೀಕ್ಷೆಯ ನಂತರ ರುಮಾ ಕೋಣೆಯಿಂದ ಹೊರಗೆ ಬಂದಾಗ, ಅವಳ ಮುಖದಲ್ಲಿ ಆನಂದದ ಪ್ರಕಾಶ ಎದ್ದುಕಾಣುತ್ತಿತ್ತು. ಶ್ರೀಮಾತೆಯೂ ಆಕೆಗೆ ದೀಕ್ಷೆಕೊಟ್ಟು ತೃಪ್ತಿಯನ್ನು ವ್ಯಕ್ತಪಡಿಸಿದರು.

ಒಂದು ತಿಂಗಳ ನಂತರ ರಾಧುವಿಗೆ ಮಗುವಾಯಿತು. ಇಷ್ಟರಲ್ಲಿ ನಳಿನಿ ಜಗಳವಾಡಿ ಮಾಕು ಹಾಗೂ ಅವಳ ಮಗ 'ನ್ಯಾಡಾ' ನನ್ನು ಕರೆದುಕೊಂಡು, ಜಯರಾಂಬಾಟಿಗೆ ಹೊರಟುಹೋದಳು. ಜಯರಾಂಬಾಟಿಯಲ್ಲಿ ಮಾಕುವಿನ ಮಗು 'ನ್ಯಾಡಾ' ಡಿಫ್ತೀರಿಯಾ ರೋಗದಿಂದ ತೀರಿಕೊಂಡ ವಿಚಾರವನ್ನು ಕೇಳಿ ಶ್ರೀಮಾತೆ ಅತ್ಯಂತ